ಬೇಲೂರಿನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ

ಸಿ.ಸಿ.ನಂ. 99/2018 DW-1

**ಮುಂದುವರೆದ ಮುಖ್ಯ ವಿಚಾರಣೆಃ-ಶ್ರೀ. ಬಿ ವಿ ಎನ್ ವಕೀಲರಿಂದ ಆರೋಪಿ ಪರಃ**

ಪಿರ್ಯಾದುದಾರರು ಅವರ ವಕೀಲರ ಮುಖಾಂತರ ನನಗೆ ನೀಡಿದ ನೋಟೀಸಿನಲ್ಲಿ ಹೇಳಿರುವ ವಿಚಾರಗಳು ಸುಳ್ಳಾಗಿರುತ್ತದೆ. ಸದರಿ ನೋಟೀಸಿಗೆ ನಾನು ಜವಾಬು ನೋಟೀಸು ನೀಡಿರುತ್ತೇನೆ. ನನ್ನ ಜವಾಬು ನೋಟೀಸಿನಲ್ಲಿ ಈ ಪ್ರಕರಣದಲ್ಲಿ ಹಾಜರುಪಡಿಸಿರುವ ಚೆಕ್ ಪಿರ್ಯಾದುದಾರರ ಕೈಗೆ ಹೇಗೆ ಹೋಗಿರುತ್ತದೆ ಎಂಬ ಬಗ್ಗೆ ಹೇಳಿರುತ್ತೇನೆ. ನನ್ನ ಚೆಕ್ಕು ದುರುಪಯೋಗ ಆಗಿದೆ ಎಂದು ಪೊಲೀಸರಿಗೆ ನಾನು ಆಮೇಲೆ ದೂರು ನೀಡಿರುತ್ತೇನೆ. ಈ ಬಗ್ಗೆ ಪೊಲೀಸರು ನನಗೆ ಹಿಂಬರಹವನ್ನು ನೀಡಿರುತ್ತಾರೆ. ಅದೆ ರೀತಿ ಬ್ಯಾನಕಿನ ಅಧಿಕಾರಿಗಚಿಳಿಗೂ ಕೂಡ ಈ ಬಗ್ಗೆ ದೂರನ್ನು ನೀಡಿರುತ್ತೇನೆ. ಈ ಬಗ್ಗೆ ಬ್ಯಾಂಕಿನ ಅಧಿಕಾರಿಗಳು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಬ್ಯಾಂಕಿನ ಅಧಿಕಾರಿಗಳು ನನ್ನ ಖಾತೆಗೆ ಸಂಬಂಧಪಟ್ಟಂತೆ ಚೆಕ್ ಸ್ಟಾಪ್ಡ್ ಎಂದು ನಮೂದಿಸಿ ರೂ. **172 /-** ಅನ್ನು ಕಡಿತಗೊಳಿಸಿರುತ್ತಾರೆ. ಈ ಪ್ರಕರಣದಲ್ಲಿ ದ್ಗಾಖಕಲಿಸಿರುವ ಚೆಕ್ಕಿನ ಜೊಎತೆ ,ಇದ್ದ ಇನ್ನೂ ಎರಡು ಚೆಕ್ ಗಳು ಕಳೆದು ಹೋಗಿರುತ್ತವೆ.

**2.** ನಾನು ಈ ಬಗ್ಗೆ ಪೊಲೀಸರಿಗೆ ನೀಡಿದ ದೂರಿನ ಯಥಾ ನಕಲನ್ನು ಹಾಜರುಪಡಿಸಿದ್ದು , ಅದನ್ನು ನಿಶಾನಿಕರಿಸಲಾಗಿವುದಿಲ್ಲ. ಸದರಿ ದೂರು ನೀಡಿದ ಬಗ್ಗೆ ಸ್ವೀಕೃತಿಯನ್ನು ನೀಡಿದ್ದು , ಅದನ್ನು ನಿಡಿ **2** ಎಂದು ಗುರುತಿಸಲಾಯಿತು. ಬ್ಯಾಂಕಿನ

ವ್ಯವಸ್ಥಾಪಕರಿಗೆ ನೀಡಿದ ಮನವಿಯನ್ನು ಹಾಜರುಪಡಿಸಿದ್ದು ಸದರಿ ಮನವಿಯನ್ನು ಬಹಳಷ್ಟು ತಿದ್ದುಪಡಿಗಳು ಕಂಡು ಬಂದಿದ್ದು , ಸದರಿ ದಾಖಲಾತಿಯನ್ನು ನಿಶಾಕರಿಸಲಾಗಿರುವುದಿಲ್ಲ. ಸ್ಟೆಟ್ ಮೆಂಟ್ ಆಫ್ ಅಕೌಂಟ್ ಅನ್ನು ಹಾಜರುಪಡಿಸಿದ್ದು ನಿಡಿ 3 ಎಂದು ಗುರುತಿಸಲಾಯಿತು. ಪಿರ್ಯಾದುದಾರರು ನನಗೆ ಯಾವತ್ತು ರೂ. 3 ಲಕ್ಷ ಹಣವನ್ನು ಸಾಲವಾಗಿ ನೀಡಿಲ್ಲ. ಸದರಿ ರೂ. 3 ಲಕ್ಷವನ್ನು ಮರುಪಾವತಿ ಮಾಡುವ ಬಾಬ್ತು ನಿಪಿ 1 ಚೆಕ್ಕನ್ನು ಯಾವತ್ತು ನೀಡಿಲ್ಲ. ನನಗೆ ಪಿರ್ಯಾದುದಾರರಿಂದ ರೂ. 3 ಲಕ್ಷ ಹಣವನ್ನು ಸಾಲವಾಗಿ ಪಡೆಯುವ ಅವಶ್ಯಕತೆ ಮತ್ತು ಪ್ರಮಯವೇ ಇರಲಿಲ್ಲ. ಪಿರ್ಯಾದುದಾರರು ನನ್ನ ವಿರುದ್ದ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತಾರೆ. ಆದ್ದರಿಂದ ಪಿರ್ಯಾದುದಾರರು ಸಲ್ಲಿಸಿದ ಪ್ರಕರಣವನ್ನು ವಜಾ ಮಾಡಬೇಕು ಮತ್ತು ನನ್ನನ್ನು ಬಿಡುಗಡೆ ಮಾಡಬೇಕು ಎಂದು ಪ್ರಾರ್ಥನೆ ಮಾಡುತ್ತೇನೆ.

**<u>ಪಾಟೀ ಸವಾಲುಃ</u> ಪಿರ್ಯಾದುದಾರ ಪರ ಶ್ರೀ. ಎನ್ ಆರ್ ವಕೀಲರಿಂದಃ**

ಪಾಟೀ ಸವಾಲಿಗೆ ಪಿರ್ಯಾದುದಾರರ ಪರ ವಕೀಲರು ಕಾಲಾವಕಾಶ ಕೋರಿದ್ದು,

ಕಾಲಾವಕಾಶ ನೀಡಿ ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ <u>ಹೇ ಕೇ ಸ ಇ ಒ</u>

ಸಾಕ್ಷಿ ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಬೇಲೂರು